SRUJANI
ISSN: 2583-3510
Indian Journal of Innovative Research and Development (SIJIRD)
Volume-1 (02), May-June 2022, Pp. 34-38
Bi-Monthly, Peer-Reviewed, Open Access, Indexed Journal
editor@srujani.in
www.srujani.in

# ಎಂ. ವ್ಯಾಸ ಅವರ ಕವಿತೆಗಳಲ್ಲಿ ಪ್ರೇಮ–ಕಾಮ

ಎಂ. ಆರ್. ಉಮೇಶ್*
* ಪಿಎಚ್.ಡಿ. ಸಂಶೋಧನಾ ವಿದ್ಯಾರ್ಥಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

***Abstract:***

ಸೃಜನಶೀಲ ಸಾಹಿತಿಯಾದ ಎಂ. ವ್ಯಾಸ ಅವರು ಕಾಸರಗೋಡಿನ ಮನ್ನಿಪ್ಪಾಡಿ ಕುಗ್ರಾಮದಲ್ಲಿ ಜನವರಿ 22, 1941 ರಂದು ಸುಬ್ರಾಯ್ ಶಾನಭೋಗ ಮತ್ತು ಲಕ್ಷ್ಮಮ್ಮ ದಂಪತಿಗಳ ಮಗನಾಗಿ ಜನಿಸಿದರು. ಹುಟ್ಟೂರಿನಲ್ಲಿಯೇ ವಿದ್ಯಾಭ್ಯಾಸವನ್ನು ಮುಗಿಸಿದ ವ್ಯಾಸರು ತಂದೆ–ತಾಯಿಯ ಬಗ್ಗೆ ಅಪಾರವಾದ ಪ್ರೀತಿಯನ್ನು ಹೊಂದಿದ್ದರು. ತಂದೆಯ ಮುಗ್ಧ ಸ್ವಭಾವ, ಆದರ್ಶವನ್ನು ಜೀವನದ ಉದ್ದಕ್ಕೂ ಅಳವಡಿಸಿಕೊಂಡು ಬಂದವರು. ಕೆ.ವಿ.ತಿರುಮಲೇಶ, ಕೆ.ಟಿ.ಶ್ರೀಧರ, ವೇಣುಗೋಪಾಲ ಕಾಸರಗೋಡು, ಗಂಗಾಧರ ಭಟ್ಟ ಇವರ ಜೊತೆ ಮಾತ್ರ ಅವರ ಒಡನಾಟ. ತಂದೆಯ ಅನಿರೀಕ್ಷಿತ ಸಾವಿನಿಂದ ಓದುವುದನ್ನು ಬಿಟ್ಟು ಕೃಷಿಯ ಕಡೆಗೆ ವಾಲಿದರು. ವಿದ್ಯಾರ್ಥಿಯಾಗಿರುವಾಗಲೇ ಅವರ ಸೃಜನಶೀಲ ಪ್ರತಿಭೆ ಚಿಗುರೊಡೆದಿತ್ತು. 1960ರಿಂದ 1963ರ ವರೆಗೆ 'ಶಶಿರಾಜ' ಎಂಬ ಕಾವ್ಯ ನಾಮದ ಮೂಲಕ ಕಥೆಗಳನ್ನು ಬರೆಯುತ್ತಿದ್ದರು. ಅವರು ಸುಳಿ (1972) ಕ್ಷೇತ್ರ (1999) ಸೃಷ್ಟಿ (2010) ಎಂಬ ಕವನ ಸಂಕಲನವನ್ನು ಹೊರತಂದಿರುವರು. ಅಪರೂಪದ ವಿಚಾರಗಳನ್ನು ಆಯ್ಕೆ ಮಾಡಿಕೊಂಡು ಅದನ್ನು ಪದುರುಗಳಲ್ಲಿ ಬಿಡಿಸಬಲ್ಲ ಸೃಜನಶೀಲ ಕ್ರಿಯಾತಜ್ಞರು. ಹೀಗೆ ಬದುಕಿನಲ್ಲಿ ಇಟ್ಟುಕೊಂಡಿದ್ದ ಅಪಾರ ಶ್ರದ್ಧೆ, ಸಾಹಿತ್ಯ–ಸಂಸ್ಕೃತಿಗಳ ಸಂವರ್ಧನೆಗಾಗಿ ಅವ್ಯಾಹಿಸಿಕೊಂಡಿದ್ದ ಸಮರ್ಪಣಾ ಮನೋಭಾವ ವ್ಯಾಸ ಅವರ ವ್ಯಕ್ತಿತ್ವದ ವಿಶಿಷ್ಟತೆಯಾಗಿದೆ. ಅವರ ಬರವಣಿಗೆಗಳಲ್ಲಿ ಮನುಷ್ಯನ ಬದುಕಿನ ಆಗುಹೋಗುಗಳ ಆಳ ಹರಹುಗಳಿವೆ. ಅವು ಕಾವ್ಯ ಪ್ರಕಾರಗಳಲ್ಲಿ ಅಭಿವ್ಯಕ್ತಗೊಂಡಿವೆ.

***Key Words:*** ಎಂ.ವ್ಯಾಸ, ಕನ್ನಡ ಸಾಹಿತ್ಯ, ಕವಿತೆ, ಕಾಮ, ಪ್ರೀತಿ, ಪ್ರೇಮ.

**ಪೀಠಿಕೆ**

ಮಾನವನ ಜೀವಿತದ ಅವಧಿಯಲ್ಲಿ ಪ್ರೇಮ–ಕಾಮ ಮಹತ್ವದ ಸ್ಥಾನವನ್ನು ಪಡೆದುಕೊಂಡಿವೆ. ಈ ಎರಡು ಘಟ್ಟಗಳು ಮನುಷ್ಯರ ಸಂತೃಪ್ತಿಯ ಜೀವನದ ಕಡೆಗೆ ತೆಗೆದುಕೊಂಡು ಹೋಗುತ್ತವೆ. ಪ್ರೇಮ ಎಂದರೆ ಒಲವು/ ಇಷ್ಟ/ಆಕರ್ಷಣೆ ಎಂಬ ಅರ್ಥವನ್ನು ನೀಡುತ್ತದೆ. ನಾವು ಮಗುವಿನ ಬಳಿ ಜೋರಾಗಿ ಕಿರುಚಿದರೆ ಅದು ಅಳುತ್ತದೆ. ಅದೇ ಮಗುವಿಗೆ ಪ್ರೀತಿಯಿಂದ ತಿಳಿ ಮಾತುಗಳನ್ನು ಹೇಳಿದರೆ ಮುಗ್ಧತೆಯಿಂದ ಒಪ್ಪಿಕೊಳ್ಳುತ್ತದೆ. ಮಕ್ಕಳು ಚಿಕ್ಕವರಾಗಿದ್ದಾಗ ಅವರು ಮಾಡುವಂತಹ ಸಣ್ಣ ಪುಟ್ಟ ತಪ್ಪುಗಳನ್ನು ನಾವು ಪ್ರೀತಿಯಿಂದ ತಿದ್ದಬೇಕು. ಪ್ರೀತಿಯ ತಿದ್ದುವಿಕೆಯಿಂದ ಬೆಳೆದಂತಹ ಮಗು ಸಮಾಜದಲ್ಲಿ ಬದುಕುವ ರೀತಿಯೆ ವಿಭಿನ್ನವಾಗಿರುತ್ತದೆ. ತಿದ್ದುವಿಕೆಯೆ ಇಲ್ಲದ ಮಗು ಬದುಕುವ ಕ್ರಮವೇ ಬೇರೆಯಾಗಿರುತ್ತದೆ. ಹಾಗಾಗಿ ಮಕ್ಕಳನ್ನು ಪೋಷಿಸುವಾಗ ಪ್ರೀತಿಯ ಪಾತ್ರ ಮಹತ್ವವಾದುದು.

ಸಮಾಜದಲ್ಲಿ ಬದುಕುತ್ತಿರುವ ಪ್ರತಿಯೊಂದು ಜೀವಿಯೂ ಪ್ರೀತಿಗಾಗಿ ಹಂಬಲಿಸುತ್ತಿರುತ್ತದೆ. ಪ್ರೀತಿ ಎನ್ನುವುದು ಸುಖಕರವಾದ ಸಂವೇದನೆ. ಇದನ್ನು ಅನುಭವಿಸಿದಾಗಲೇ ಅದರ ಅನುಭವ ವ್ಯಕ್ತವಾಗುತ್ತದೆ. ಪ್ರೀತಿ ಎಂಬ ಅಸ್ತ್ರದಿಂದ ನಾವು ಏನನ್ನಾದರೂ ಗೆಲ್ಲಬಹುದು. ಜಿಡ್ಡು ಕೃಷ್ಣಮೂರ್ತಿ ಅವರ ಪ್ರೀತಿಯ ಬಗೆಗಿರುವ ಉಲ್ಲೇಖ ಸಮರ್ಥನೀಯವಾದುದು. "ನಮ್ಮೆಲ್ಲಾ ಸಮಸ್ಯೆಗಳನ್ನು ನೀಗಿಸಿ

*Please cite this article as:* ಎಂ. ಆರ್. ಉಮೇಶ್. (2022). ಎಂ. ವ್ಯಾಸ ಅವರ ಕವಿತೆಗಳಲ್ಲಿ ಪ್ರೇಮ–ಕಾಮ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 1(2), 34–38.

ಬಿಡುವ ಏಕೈಕ ವಸ್ತು ಪ್ರೀತಿ" ಎಂದು ಹೇಳುತ್ತಾರೆ. ಪ್ರೀತಿ ಒಂದಿದ್ದರೆ ಏನಾದರೂ ಗೆಲ್ಲುವೆನು ಎಂಬ ಎದೆಗಾರಿಕೆ ಆ ವ್ಯಕ್ತಿಯಲ್ಲಿ ಸುಳಿಯುತ್ತದೆ. ಪ್ರೀತಿ ಬದುಕಿನ ಮೂಲ ಚೈತನ್ಯವಾಗಿದೆ. ಮಾನವ-ಪ್ರಕೃತಿ, ಮಾನವ-ಮಾನವ ಸಂಬಂಧಗಳ ಅನೇಕ ಸ್ತರಗಳಲ್ಲಿ ಪ್ರೀತಿಯ ವ್ಯಾಪ್ತಿ ಪಸರಿಸಿದೆ. ಮಾನವನ ಸೃಜನಶೀಲ ಮನಸ್ಸು ಪ್ರೀತಿಯಲ್ಲಿ ಅಡಕವಾಗಿರುವುದರ ಕುರಿತಾಗಿ 'ಪ್ರೀತಿ ಇಲ್ಲದ ಮೇಲೆ' ಕವಿತೆಯಲ್ಲಿ ಪ್ರೀತಿಯ ಮಹತ್ವವನ್ನು ಈ ರೀತಿ ಹಿಡಿದಿಡಲಾಗಿದೆ.

*"ಪ್ರೀತಿ ಇಲ್ಲದ ಮೇಲೆ-*
*ಹೂವು ಅರಳೀತು ಹೇಗೆ?*
*ಮೋಡ ಕಟ್ಟೀತು ಹೇಗೆ?*
*ಹನಿಯೊಡೆದು ಕೆಳಗಿಳಿದು*
*ನೆಲಕ್ಕೆ ಹಸಿರು ಮೂಡೀತು ಹೇಗೆ?*

ಎಂದು ಕವಿ ಜಿ.ಎಸ್.ಶಿವರುದ್ರಪ್ಪನವರು ಪ್ರೀತಿಯ ಸರ್ವಶಕ್ತಿ ಮತ್ತು ಸರ್ವಾಂತರ್ಯಾಮಿ ತನವನ್ನು ತೋರಿಸಿದ್ದಾರೆ."[1] ಇಲ್ಲಿ ಪ್ರೀತಿ ಇರದಿದ್ದರೆ ಮನುಷ್ಯನ ಮನಸ್ಸು ಮರುಭೂಮಿ ಇದ್ದಂತೆ. ಪ್ರೀತಿ ನಮ್ಮ ಮನಸ್ಸನ್ನು ಚೈತನ್ಯಶೀಲವನ್ನಾಗಿಸುತ್ತದೆ. ಸುಖ - ದುಃಖಮಯವಾದ ಪ್ರೇಮಗಳನ್ನು ಹೊಂದಿರುವ ನೂರಾರು ಕಥೆಗಳು ಚಲನಚಿತ್ರವಾಗಿ ಯಶಸ್ವಿಯಾಗಿ ಪ್ರದರ್ಶನಗೊಂಡಿವೆ. ಪ್ರೀತಿಯನ್ನೇ ಕೇಂದ್ರ ಬಿಂದುವಾಗಿರಿಸಿರುವ ಹಲವಾರು ಪ್ರೇಮ ಕವಿತೆಗಳು ನಮ್ಮ ನಾಲಿಗೆ ಮೇಲೆ ನಲಿದಾಡುತ್ತಿವೆ. ಇಷ್ಟೆಲ್ಲಾ ರೀತಿಯಿಂದಾಗಿ ಪ್ರೀತಿ ನಮಗೆ ತಿಳಿದೋ, ತಿಳಿಯದೇನೋ ನಮ್ಮನ್ನು ಆಕರ್ಷಣೆ ಮಾಡುತ್ತಿದೆ.

ಕೆಲ ಪುರಾಣ, ಕಥೆಗಳಲ್ಲಿ ನಿಷ್ಕಲ್ಮಶ ಪ್ರೀತಿಗಳಿಗೆ ಉದಾಹರಣೆಯಾಗಿರುವ ಕಥೆಗಳನ್ನು ಕಾಣುತ್ತೇವೆ. ಈ ಪ್ರೀತಿ ಉತ್ತುಂಗ ಮಟ್ಟಕ್ಕೆ ತಲುಪಿ 'ತಾಜ್‌ಮಹಲ್'ನಂತಹ ಇನ್ನು ಅನೇಕ ಸುಂದರ ಕಟ್ಟಡಗಳು ಪ್ರೇಯಸಿ/ ಪ್ರಿಯಕರನಿಂದ ನಿರ್ಮಿತಗೊಂಡಿರುವುದನ್ನು ಕಾಣಬಹುದು. ಪ್ರೀತಿಯ ನೆನಪಿಗಾಗಿ ಅನೇಕ ತ್ಯಾಗಗಳು ನಡೆಯುತ್ತಲೇ ಇವೆ. ಇದೇ ಪ್ರೀತಿಯನ್ನು ಜೀವನದ ಉದ್ದಕ್ಕೂ ಅಳವಡಿಸಿಕೊಂಡು ಹೋದರೆ ನಾವು ಏನನ್ನಾದರೂ ಗೆದ್ದೇ ಗೆಲ್ಲುತ್ತೇವೆ ಎಂಬ ಆತ್ಮವಿಶ್ವಾಸ ಸಮಾಜದಲ್ಲಿ ಮನೆ ಮಾಡಿದೆ.

ಪ್ರೀತಿ ನಾವು ತಿಳಿದುಕೊಂಡಷ್ಟು ಸರಳವಾಗಿಲ್ಲ. ಪ್ರೀತಿಸುವುದಕ್ಕೂ ಪ್ರೀತಿಸಿಕೊಳ್ಳುವುದಕ್ಕೂ ಯೋಗ್ಯತೆಯನ್ನು ಮೊದಲು ಸಂಪಾದಿಸಬೇಕು. ಆಧುನಿಕ ಜಗತ್ತಿನಲ್ಲಿ ಅನೇಕ ವಿಕಲ್ಪಗಳಿಂದಾಗಿ ಪ್ರೀತಿ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿದೆ. ಬಹುಪಾಲು ಜನರ ಅಭಿಪ್ರಾಯದಲ್ಲಿ ಪ್ರೀತಿ ಲೈಂಗಿಕ ಆಕರ್ಷಣೆಯ ಕಡೆಗೆ ವಾಲುತ್ತಿದೆ. ಪ್ರಕೃತಿ ಬಗೆಗಿನ ನಿರ್ಲಕ್ಷ್ಯ, ತಂದೆ-ತಾಯಿ ಬಗೆಗಿನ ಅನಾದರ, ಸಹಜೀವಿಗಳ ಕುರಿತು ನಿರಾಸಕ್ತಿ, ಹಾಗೂ ಹೆಣ್ಣು ಮಕ್ಕಳ ಬಗ್ಗೆ ಕ್ರೌರ್ಯ ತುಂಬಿದೆ. ಗಂಡು-ಹೆಣ್ಣಿನ ಆಕರ್ಷಣೆಯ ಪ್ರಣಯ ಭಾವದಲ್ಲಿನೇ ಪ್ರೀತಿ ಬಂಧನವಾಗಿದೆ. ಇಂದಿನ ಪ್ರೇಮಿಗಳು ಸಮಾಜಕ್ಕೆ ಆದರ್ಶವಾಗುತ್ತಿಲ್ಲ. ಪ್ರೀತಿಯ ಕೊರತೆಯಿಂದಾಗಿ ಪ್ರೇಮಗಳು ಸೊರಗುತ್ತಿವೆ. ಪ್ರೇಮವಿವಾಹಗಳು ಮುರಿದುಬೀಳುತ್ತಿವೆ. ಸಂಬಂಧಗಳಲ್ಲಿನ ಪ್ರೀತಿ ಬಾಡಿ ಹೋಗುತ್ತಿದೆ. ಪ್ರೇಮಿಗಳ ಪ್ರೇಮ ಕೇವಲ ಕಾಮಕ್ಕೆ ಸೀಮಿತಗೊಂಡಿದೆ.

ಪ್ರಸ್ತುತ ಪ್ರೇಮವನ್ನು ನೋಡಿದರೆ ಮನಸ್ಸಿಗೆ ಅಸಹ್ಯವನ್ನು ಹುಟ್ಟಿಸುವಂತಿದೆ. ಅದು ಮೋಜು ಮಸ್ತಿಯಿಂದ ಕೂಡಿದೆ. ಪ್ರೀತಿ ಧರ್ಮಸಂಘರ್ಷ, ಜಾತಿ ವೈಷಮ್ಯ, ಅಂತಃಕಲಹ, ಲೈಂಗಿಕತೆಯ ಕಡೆಗೆ ಹೊರಟಿರುವಂತಾಗಿದೆ. ಪ್ರೇಮಿಗಳ ಪ್ರೀತಿ ಆದರ್ಶದ ನೆಲೆಯಲ್ಲಿ ಕೊನೆಮುಟ್ಟಿರುವುದು ತುಂಬಾ ವಿರಳ. ಅರ್ಧದಲ್ಲಿಯೇ 'ನೀರಿನಿಂದ ಹೊರ ಬಿದ್ದ ಮೀನಿನಂತೆ' ಚಡಪಡಿಸಿ ಸಾಯುವರು. ಪ್ರೀತಿಯ ವಾಚ್ಯಾರ್ಥವನ್ನು ರೂಢಿಸಿಕೊಂಡು ಬದುಕಿದರೆ ಯುವಕರ ಬದುಕು ಹಸನಾಗಿರುತ್ತದೆ.

ಪುರುಷನ ಕಾಮಕ್ಕೆ ಸ್ತ್ರೀ ಬಲಿಯಾಗುವಳು. ಸ್ತ್ರೀಯನ್ನು ಪುರುಷ ಅತ್ಯಾಚಾರದ ಮೂಲಕ ಕಾಮಿಸುವನು. ಕೆಲ ಕಾಮಗಳಲ್ಲಿ ಹಣ ಪ್ರಾತಿನಿಧ್ಯವನ್ನು ವಹಿಸಿರುತ್ತದೆ. ಇನ್ನು ಕೆಲವು ಕಾಮಗಳು ಶ್ರೀಮಂತ-ಬಡವ, ಪ್ರಬಲ ವರ್ಗ-ದಲಿತ ಹೆಂಗಸರ ಮೇಲೆ ದೌರ್ಜನ್ಯದ ಮೂಲಕ ಕಾಮಿಸುವರು. ಲೈಂಗಿಕತೆಯನ್ನು ಅನುಭವಿಸುವ ಗಂಡಸು ಸಂಚನ್ನು ರೂಪಿಸುವನು. ಈತನು ರೂಪಿಸಿದ ಸಂಚಿಗೆ ಅಸಹಾಯಕರಾಗುವ ಸ್ತ್ರೀಯರು ಬಲಿಪಶುಗಳಾಗಿರುವುದು ವ್ಯಾಸರ ಕೃತಿಗಳಲ್ಲಿ ಕಾಣುತ್ತೇವೆ.

ಪ್ರಸ್ತುತದಲ್ಲಿ 'ಹನಿಟ್ರ್ಯಾಪ್' ಎಂಬ ನೂತನ ಕಾಮ ಬೆಳಕಿಗೆ ಬಂದಿದೆ. ಸಮಾಜದ ಗಣ್ಯ ವ್ಯಕ್ತಿಗಳು, ಪೊಲೀಸ್ ಅಧಿಕಾರಿಗಳು, ಮಿಲಿಟರಿ ಅಧಿಕಾರಿಗಳು ಇದರ ಕೇಂದ್ರ ಬಿಂದುಗಳಾಗಿರುವರು. ಹೆಂಗಸರನ್ನು ಬಳಸಿಕೊಂಡು ದೇಶದ ಗಡಿ ವಿಚಾರ, ಅನೇಕ ಯೋಜನೆಗಳ ರಹಸ್ಯ, ಕಾನೂನಿನ ಸೂಕ್ಷ್ಮ ವಿಚಾರಗಳನ್ನು ತಿಳಿದುಕೊಳ್ಳುವರು. ಆ ಮೂಲಕವಾಗಿ ಸಮಾಜದಲ್ಲಿರುವ ಪ್ರಶಾಂತ ವಾತಾವರಣವನ್ನು ಹಾಳುಗೆಡವುದನ್ನು ಕಾಣಬಹುದು.

ಕಾಮವನ್ನು ಮನುಷ್ಯರು ಉತ್ತಮವಾದಂತಹ ಹವ್ಯಾಸಗಳ ಮೂಲಕ ದಹಿಸಿಕೊಳ್ಳಬೇಕು. ಯುವಕರಿಗೆ ಕಾಮದ ಅರಿವನ್ನು ಸಮಾಜ ಹಾಗೂ ಶಿಕ್ಷಕ ನೀಡುವಂತಾಗಬೇಕು. ಕಾಮಕ್ಕೆ ಬಲಿಯಾಗುತ್ತಿರುವ ಹೆಣ್ಣು ಮಕ್ಕಳಿಗೆ ಸರ್ಕಾರ ಮತ್ತು ಸಮಾಜ ಸೂಕ್ತವಾದಂತಹ ರಕ್ಷಣೆ

[1] ಸರ್ಫ್ರಾಜ್ ಚಂದ್ರಗುತ್ತಿ. (2007). *ಸುಗಮ ಸಂಗೀತಕ್ಕೆ ಆಧುನಿಕ ಕನ್ನಡ ಕವಿಗಳ ಕಾಣಿಕೆ.* ಅಕ್ಷಯ ಪ್ರಕಾಶನ. ಪು.231

ಒದಗಿಸಿಕೊಡಬೇಕು. ಈ ನಿಟ್ಟಿನಲ್ಲಿ ಸಮಾಜದಲ್ಲಿ ಎಲ್ಲರ ಸಹಕಾರದೊಂದಿಗೆ ಅನೈತಿಕ ಕಾಮವನ್ನು ತಡೆಗಟ್ಟಬಹುದು.

ಒಟ್ಟಾರೆ ವ್ಯಾಸ ಅವರ ಮುಂದೆ ಉಲ್ಲೇಖಿಸುವ ಕವನಗಳಲ್ಲಿ ಪ್ರೇಮ–ಕಾಮದ ವಿಕೃತಿಯ ಅಂಶಗಳನ್ನು ವ್ಯತಿರಿಕ್ತವಾಗಿ ಪ್ರಸ್ತುತಪಡಿಸುತ್ತವೆ. ಪ್ರೇಮ ಅರಿಯದೆ, ಅರಿವಿಲ್ಲದೆ ಆಗಮಿಸುವಂತಹ ಒಂದು ಅಮೂರ್ತ ವಿಚಾರ. ನಯ, ನಾಜೂಕಿನ ಯುವಕ/ಯುವತಿಯರು ಪ್ರೇಮದ ಹೆಸರಿನಲ್ಲಿ ಪಾರ್ಕ್ ಸುತ್ತುವುದಿಲ್ಲ. ಮಜ ಉಡಾಯಿಸುವುದು ಇಲ್ಲವೇ ಇಲ್ಲ. ಏಟು ಬಿದ್ದ ಮೃಗದಂತೆ ಚಡಪಡಿಸುತ್ತಿರುವ ವಿರಹಯಾತನೆಯ ಬೇಗುದಿಯಲ್ಲಿ ನರಳುತ್ತಿರುವ ದುರಂತ ವ್ಯಕ್ತಿಗಳಾಗಿದ್ದಾರೆ. 'ಕಾಮ' ಕ್ಷಣಕಾಲ ತನ್ನ ಇರುವಿಕೆಯನ್ನು ತೊಡೆದು ಹಾಕುವಂತಹ ಅನುಭಾವವನ್ನು ನೀಡುವುದಾಗಿದೆ. ಈ ತೆರನಾದಂತಹ ತೊಳಲಾಟದ ಪಾತ್ರಗಳ ಮೂಲಕ ಕವನಗಳನ್ನು ರಚಿಸಿದ್ದಾರೆ.

'ಗರ್ಭ' ಕವಿತೆಯಲ್ಲಿ ಹೆಣ್ಣನ್ನು ಮರಕ್ಕೆ ಹೋಲಿಸಿರುವುದು. ಹೆಣ್ಣಿನ ಬೆಳವಣಿಗೆಯನ್ನು ಮರದ ಬೆಳವಣಿಗೆಯಲ್ಲಾಗುವ ಕ್ರಿಯೆಯ ಜೊತೆಗೆ ತಳಕು ಹಾಕುವುದು. ಪ್ರೇಮದ ನೆಲೆಯನ್ನು ಗುರುತಿಸುವ ಸಂಗತಿಗಳು ಇವೆ. ಈ ಕುರಿತು:

*"ಯಾತ್ರೆಗಳಲ್ಲಿ : ಬಿಂದು ಬಿಂದುಗಳಾಗಿ : ಅನೇಕವಾಗಿ ಗುಟ್ಟಾಗಿ*
*ಹುಟ್ಟುತ್ತಿದ್ದವು ಎಲೆಎಲೆಗಳ ಪ್ರಸವ ಬಿಂದುಗಳಲ್ಲಿ*
*ಮೊಗ್ಗುಗಳಾಗಿ : ಮೊದ್ದುಗಳಾಗಿ : ಮುದ್ದು ಮುದ್ದುಗಳಾಗಿ :*
*ಗರ್ಭಗಳಂತೆ*
*ಉಬ್ಬುತ್ತಿದ್ದುವು ಒಡೆಯುತ್ತಿದ್ದುವು ಮೊಗ್ಗುಗಳು ಮೊಟ್ಟೆಗಳಂತೆ*
*ಗರ್ಭ"* (ಸೃಷ್ಟಿ, ಪು.30)

ಇದು ಹೆಣ್ಣು ಮತ್ತು ಮರದ ಜೈವಿಕ ಕ್ರಿಯೆಯ ಸಾಮ್ಯತೆಯನ್ನು ಪ್ರಸ್ತುತಪಡಿಸುವ ಮೂಲಕ ಹೆಣ್ಣಿನ ಅನನ್ಯತೆಯನ್ನು ಗುರುತಿಸುತ್ತಾರೆ.

'ಸ್ವೀಕರಾ' ಕವನದಲ್ಲಿ ಪ್ರೇಮಿ–ಪ್ರೇಯಸಿ ನಿತ್ಯ ಸಮುದ್ರದ ಬಳಿ ಸಂಧಿಸುತ್ತಿರುತ್ತಾರೆ. ಒಮ್ಮೆ

*"ನನ್ನ ನಿನ್ನ ಯೌವನದ ಯವನಿಕೆಯ ಹಿಂದೆ*
*ಮರೆಯಾಗಿ, ಹೊರೆಯಾಗಿ ಹೋಗುತ್ತಿರುವಾಗ*
*ಈ ಆ ಸುಖದ ನೋವನ್ನು ನರಳುತ್ತಾ ನಗುತ್ತಾ ಸ್ವೀಕರಿಸೋಣ.*
*ಹೀಗಿಲ್ಲವಾದರೆ:*
*ಇದ್ದುದ್ದೂ, ಬಿದ್ದುದ್ದೂ, ನನಗೂ ನಿನಗೂ*
*ದಕ್ಕದೇ ಹೋಗಿ ಬಿಡಬಹುದು ; ನೋಡು ಪ್ರಿಯೆ."* (ಸುಳಿ, ಪು.8)

ಈ ಕವನ ವಯಸ್ಸಿನ ಕಾಮ–ಲೈಂಗಿಕತೆ ಪ್ರೇಮವನ್ನು ಹುಟ್ಟಿಸುತ್ತದೆ. ಅಲೆಸುತ್ತದೆ. ಇಂತಹ ಪ್ರೀತಿಯೊಳಗೆ ಸುಖವಿದೆ. ಅದರಲ್ಲಿ ನೋವಿದೆ. ಅಂದರೆ ಸುಖ ಮತ್ತು ನೋವನ್ನು ಅಕ್ಷರದಲ್ಲಿ ಹಿಡಿದಿಡಲು ಸಾಧ್ಯವಿಲ್ಲ. ಅಂತಹ ಸುಖ ಮತ್ತು ನೋವನ್ನು ಸ್ವೀಕರಿಸಬೇಕು ಇಲ್ಲವಾದರೆ ವಯೋ ಸಹಜವಾದ ಪ್ರೇಮ– ಕಾಮ ಇಬ್ಬರಿಗೆ ದಕ್ಕದೆ ಹೋಗಬಹುದು ಎಂಬ ಸಂದೇಶವನ್ನು ನೀಡುತ್ತದೆ.

*"ನನ್ನ*
*ಈ ಒಂದು ಅನಿರೀಕ್ಷಿತ ಎಚ್ಚೆತ್ತ ರಾತ್ರಿಯಲ್ಲಿ*
*ಬೇಡದೆ ಪಡೆದ ಮುತ್ತುಗಳು*
*ಆಕಾಶದಲ್ಲಿ*
*ಕತ್ತಲೆಯನ್ನು*
*ಅಲಂಕರಿಸಿ ಬಿಟ್ಟಿವೆ*
*ಹೇ ಅಂಧಕಾರವೇ*
*ನೀನು ಮುತ್ತಿನ ಮತ್ತಿನಲ್ಲಿ"* (ಸುಳಿ, ಪು.24)

ಎಂದು 'ಮುತ್ತುಗಳು' ಕವನ ಇಡೀ ರಾತ್ರಿ ಮುತ್ತಿನ ಚುಂಬನದಿಂದಲೇ ಪ್ರೇಮಿಗಳು ರಾತ್ರಿ ಕಳೆಯುವರು. ಇವರಿಗೆ ಮುತ್ತೇ ಅಮಲು ಆಗಿ ಅಂತಹ ಅಮಲುವೇ ಪ್ರೇಮವಾಗಿ ಪರಿಣಮಿಸಿದಂತೆ ಭಾಸವಾಗಿದೆ.

*"ಪೂರ್ತಿ ನಿನ್ನ ಪೂರ್ತಿ ನಿನ್ನ*
*ಅಂಧ –*
*ಕಾರದಲ್ಲಿ*
*ಸೃಷ್ಟಿ*
*ವೃಷ್ಟಿ ವ್ಯಕ್ತದಲ್ಲಿ ಅವ್ಯಕ್ತದಲ್ಲಿ*
*ಮನೋಮೂರ್ತಿಗೆ*
*ಗುಪ್ತ ಗಂಗೆಯಲ್ಲಿ ಸುಪ್ತ ತ್ರಾಣ ಪ್ರಾಣ ದಾನ ಧನ*
*ಬಂಧ ಬಂಧನ......!"* (ಸೃಷ್ಟಿ, ಪು.9)

ಎಂಬ ಸಾಲುಗಳಲ್ಲಿ ಗಂಡು–ಹೆಣ್ಣು ಪರಸ್ಪರ ಪ್ರೇಮದೊಳಗಿನ ಕಾಮ ಎಂಬ ಅಂಧಕಾರದ ಬಂಧನಕ್ಕೆ ಒಳಗಾಗಿದ್ದಾರೆ. ಈ ಬಂಧನದೊಳಗೆ ಹೊಸ ಸೃಷ್ಟಿಯನ್ನು ಹುಟ್ಟು ಹಾಕುವುದರ ಕುರಿತು ಆಲೋಚನೆಯಲ್ಲಿರುವವರು. ಸಮ್ಮಿಲನವನ್ನು ಹೊಂದುವಂಥ ಪ್ರೇಮಿಗಳು ಗಾಢಾಂಧಕಾರದಿಂದ ಹೊರ ಬರಬೇಕು ಎಂಬ ಆಶಾವಾದ ಈ ಕವಿತೆಯಲ್ಲಿ ಅಡಕವಾಗಿದೆ.

*"ಪಾಯದಲ್ಲಿ ಹಂಬಲಿಸಿದ*
*ಸುಖ: ರೋದನ*
*ಗಮ್ಯ ಗುರಿಗೆ ಧಾವಿಸಿ ಸುಖ:"* (ಸೃಷ್ಟಿ, ಪು–34)

ಈ ಕವಿತೆಯಲ್ಲಿ ಪ್ರೇಮಿಗಳು ಪ್ರೇಮಕ್ಕೆ ಮೌಲ್ಯ ನೀಡುವುದಿಲ್ಲ. ಕೇವಲ ಪ್ರಣಯದ ಸುಖಕ್ಕಾಗಿ ಹಾತೊರೆಯುವುದನ್ನು ಪ್ರತಿಬಿಂಬಿಸುತ್ತದೆ. ಹಾಗೆಯೇ ಮುಂದುವರೆಯುತ್ತಾ:

*"ಮುಖಾಮುಖಿ ಸಖಾ: ಸಖಿ: ಸುಖಃ ಭ್ರಮಣ*
*ರಮಾರಮಣ!*
*ಕಂದರುಗಳು ಆಳ*
*ಬೀಳುಗಳು ನಿಖರ: ಪ್ರಖರ: ಪ್ರಜ್ವಲ!"* (ಸೃಷ್ಟಿ, ಪು.35)

ಇದು ಪ್ರೇಮಿಗಳ ಸುಖ ಕೇವಲ ದೇಹಕ್ಕೆ ಮಾತ್ರ ಸೀಮಿತಗೊಳಿಸುತ್ತದೆ. ಪ್ರೀತಿ ಜೀವಾಳವಾದ ಜೀವನಾದರ್ಶನದ ತತ್ವಗಳು ಅಪ್ರಸ್ತುತಗೊಳ್ಳುತ್ತವೆ. ವ್ಯಾಸ ಅವರು ತಮ್ಮ ಕವಿತೆಗಳಲ್ಲಿ ಪ್ರೀತಿ ಚೌಕಟ್ಟಿನಲ್ಲಿ ಕಾಮವನ್ನು ಮೊದಲು ಮಾಡುವ ತಂತ್ರಗಾರಿಕೆಯನ್ನು ವಿಡಂಬಿಸುವ ನಿಲುವು ಕಂಡುಬರುತ್ತದೆ.

ವ್ಯಾಸರ ಕವಿತೆಯಲ್ಲಿ ಅತ್ಯಾಚಾರವು ವಸ್ತುವೇ. ಹೇಗೆಂದರೆ ನಮ್ಮ ದೇಶದ ಕಾನೂನು ಇಷ್ಟೊಂದು ಬಿಗಿಯಾಗಿದ್ದರೂ ಅತ್ಯಾಚಾರದ ಸಂಖ್ಯೆ ಕಡಿಮೆಯಾಗಿಲ್ಲ. ಇದೊಂದು ಸಾಮಾಜಿಕ ಪಿಡುಗು ಎಂಬಂತೆ ದೇಶವ್ಯಾಪಿ ಆವರಿಸಿಕೊಂಡಿದೆ. ಅತ್ಯಾಚಾರ ಜರುಗುವ ಸ್ಥಳಗಳೆಂದರೆ ಸಾಮಾನ್ಯವಾಗಿ ಮನೆ, ಆಫೀಸ್, ಬಸ್ಸು, ರೈಲು, ಬಸ್‌ಸ್ಟ್ಯಾಂಡ್, ವಿಶ್ವವಿದ್ಯಾಲಯ, ಹೊಲ, ತೋಟ, ಹೀಗೆ ನಾನಾ ಕಡೆ ಹೆಣ್ಣಿನ ಮೇಲೆ ಬಲಾತ್ಕಾರಗಳು ನಡೆಯುವವು. ಈ ಬಲಾತ್ಕಾರಕ್ಕೆ ಮುಖ್ಯ ಕಾರಣ ಕಾಮ. 'ನಿರಂತರ' ಕವಿತೆ ಹೆಣ್ಣಿನ ಮೇಲೆ ನಿರಂತರವಾಗಿ ಕಾಮಕ್ಕಾಗಿ ನಡೆಯುವ ಅತ್ಯಾಚಾರಗಳನ್ನು ಪ್ರಸ್ತುತಪಡಿಸುತ್ತದೆ.

*"ಬೀಜಗಳನ್ನು ನೆಡುತ್ತವೆ : ಸುಡುತ್ತವೆ*
*ಸುಖದ ಚಿತೆಯ : ಹೋಮ ಕುಂಡದ*
*ಆಹುತಿಗಳಾಗಿ*
*ಹಸಿವಿನ*
*ಮಹಾವೃಕ್ಷಗಳ ಶಿಶುಗಳನ್ನ*
*ಬೇರುಗಳಾಗಿ ನೆಲಕ್ಕೆ ಊರುತ್ತವೆ"* (ಸೃಷ್ಟಿ, ಪು.22)

ಈ ಕವಿತೆ ಪುರುಷ ಪ್ರಧಾನ ಸಮಾಜ ವ್ಯವಸ್ಥೆಯಲ್ಲಿ ಹೆಣ್ಣಿನ ಮೇಲೆ ಬಲಾತ್ಕಾರ, ದೌರ್ಜನ್ಯ ನಡೆಸುತ್ತಿರುವುದನ್ನು ತಿಳಿಸುತ್ತದೆ. ಹಾಗೆಯೇ ಅತ್ಯಾಚಾರ ಕುರಿತು:

*"ಇನ್ನೂ ಇನ್ನೂ ಇದ್ದೇ ಇದ್ದಂತೆ ನಿರಂತರ*
*ಮುಂದೆ ಮುಂದೆ : ಮುಂದೆ ಮುಂದೆ ರತಿ–*
*ಮದನಾಕಾರವಾಗಿ"* (ಸೃಷ್ಟಿ, ಪು.23)

ಸಂಭೋಗಕ್ಕಾಗಿ ಪುರುಷನ ರತಿ ನಡೆಯುತ್ತಲೇ ಇರುತ್ತದೆ. ಇದು ದೌರ್ಜನ್ಯ ಎಂಬ ಅತಂಕವನ್ನಿಲ್ಲಿ ವ್ಯಕ್ತಪಡಿಸುತ್ತಾರೆ.

*ವ್ಯಾಸರು 'ನೀನಾ . . . .' ಕವಿತೆಯಲ್ಲಿ;*
*"ನಾಮಧಾರಿ ಭಾವಧಾರಿ ಜೀವಧಾರೀ*
*ಕಾಲುವೆ ದಾರಿ ಕಾಲುದಾರಿ*
*ಕಚ್ಚಿ ಹಿಡಿದಿದೆ ಮುಚ್ಚಿದ ಬೆಚ್ಚಿದ ಬಾಗಿಲ ದಳ*
*ದಳದ ಸಂಧಿಯಲ್ಲಿ ಹಾ......ವು*
*ಹೆಡೆ ಚುಚ್ಚಿದೆ! ಹೆಡೆ ಬಿಚ್ಚಿದೆ. ಮುಚ್ಚಿದ ಬಿಗಿದ ಮುಷ್ಟಿಯ ಥರ*
*ತರತರಿಗುಟ್ಟಿದೆ ಇನ್ನೇನು*
*ಬಿಚ್ಚುವ ಗುಟ್ಟಿನ ಹಾಗೆ*
*ವಿಲವಿಲ ಹೊಸತು ಹುಟ್ಟಿನ ಹಾಗೆ ಹಾಹಾ"* (ಸೃಷ್ಟಿ, ಪು.36)

ಇಲ್ಲಿನ ಸಾಲುಗಳು ಪುರುಷರು ಕಾಮ ಈಡೇರಿಸಿಕೊಳ್ಳುವ ಹಪಹಪಿತನ, ಸಮಯ ಸಾಧಕತನ ಇದರಿಂದ ಹೆಣ್ಣಿನ ಮೇಲಿನ ಶೋಷಣೆಯನ್ನು ಹಿಡಿದಿಡುತ್ತವೆ.

*"ನನ್ನ ಅಕ್ಷಯಪಾತ್ರದಲ್ಲಿ ನಿಧಿ ಇನ್ನೂ ಕ್ಷಯವಾಗಿಲ್ಲ*
*ಬಗೆಯುತ್ತಿದ್ದೇನೆ ಈ ಮಣ್ಣನ್ನು*
*ಈ ಹೆಣ್ಣನ್ನು*
*ನನ್ನ ಸೂರ್ಯದಾಹ ಹಿಂಗುವವರೆಗೂ"* (ಸೃಷ್ಟಿ, ಪು.53)

ಅದಕ್ಕೆ ಕೊನೆ ಎಂದೋ! ಎಂಬ ಭಾವನೆ ನಮ್ಮನ್ನು ಕಾಡುತ್ತದೆ. ಮನುಷ್ಯನಿಗೆ ಹಣದ ದಾಹ ನೀಗಿಸಬಹುದು. ಆದರೆ ಕಾಮದಾಹವನ್ನು ನೀಗಿಸುವುದು ಕಷ್ಟವಾದ ಕೆಲಸ. ಹೇಗೆಂದರೆ ಸೂರ್ಯದಾಹ ಹಿಂಗುವ ಪ್ರತಿಮೆ ಮೂಲಕ ಕಟ್ಟಿಕೊಡಲಾಗಿದೆ.

ವ್ಯಾಸರ 'ಮೈದಾನ' ಕವಿತೆಯಲ್ಲಿ ಕವಿಯೇ ಸೃಷ್ಟಿಸಿಕೊಂಡಿರುವ ದುರ್ಗಾಪುರ ಎಂಬ ಊರೊಂದಿದೆ. ಈ ಊರಿನಲ್ಲಿ ಶೀಲಾ–ರವಿ, ಗಣಪತಿ–ಲೀಲಾ, ಸುಮಾ–ಶೇಖರ್ ವಿವಾಹವಾಗುವುದು. ಇವರು ನೆಮ್ಮದಿಯಿಂದ ಜೀವನ ನಡೆಸುವುದಕ್ಕೆ ಊರಿನ ಕೆಲ ಕುಹಕಿಗಳು ಬಿಡದಿರುವುದರ ಸಂಗತಿಗಳನ್ನು ಹೀಗೆ ನೀಡಲಾಗಿದೆ.

*"ರಾಮಾಶಾಸ್ತ್ರಿ ಶ್ರೀಧರಭಟ್ಟರು ವಾಸುದೇವನಾಯಕ್*
*ಎಲ್ಲಾ ಮೈ–*
*ದಾನದಲ್ಲಿ. ಪಶುಗಳು ಮೇಯುತ್ತಿರುವುದನ್ನು*
*ಕಂಡಂತೆ–ಕಂಡರು. ನಕ್ಕರು."* (ಕ್ಷೇತ್ರ, ಪು.4)

ಸಮಾಜದಲ್ಲಿ ಜನರು ಪ್ರೀತಿಯಿಂದ ಜೀವನ ಸಾಗಿಸುತ್ತಿದ್ದರೆ ಅಸೂಯೆ ಪಡುವವರೇ ಅಧಿಕ. ರಾಮಾಶಾಸ್ತ್ರಿ, ಶ್ರೀಧರಭಟ್ಟ, ವಾಸುದೇವ ಅವರಂತಹ ಕಾಮಾಲೆ ವ್ಯಕ್ತಿಗಳೇ ಬಹಳ. ಇವರು ವಿವಾಹವಾದ ಮುಗ್ಧ ಹೆಂಗಸರ ಮೇಲೆ ತಮ್ಮ ಕಾಮುಕ ದರ್ಪವನ್ನು ನಡೆಸುವುದು ಕಂಡು ಬರುತ್ತದೆ. 'ವಾಲ್ಮೀಕಿ' ಕವಿತೆಯಲ್ಲಿ ಮನುಷ್ಯನಿಗೆ ಕಾಮದಾಸೆ ಬಹಳ. ಹಾಗಾಗಿ ಈ ಆಸೆಯನ್ನು ತ್ಯಜಿಸಬೇಕಾದರೆ ಬುದ್ಧನ ಮಾರ್ಗವಾದ, 'ಆಸೆಯೇ ದುಃಖಕ್ಕೆ ಮೂಲ' ಎಂಬಂತೆ ಆಸೆಯನ್ನು ಸಂಪೂರ್ಣವಾಗಿ ಕೈ ಬಿಡಬೇಕು. ಹೀಗೆ ಹೇಳಿ ಬುದ್ಧ ನಿರ್ವಾಣ ಹೊಂದಿದ. ಆದರೆ ಬುದ್ಧನ ಭೂಮಿಯಲ್ಲಿ ಹುಟ್ಟಿದ ನಾವು 'ಆಸೆ'ಯ ತುಡಿತವನ್ನು ಬಿಟ್ಟಿಲ್ಲದಿರುವುದನ್ನು ಮಾರ್ಕ್ ಮಾಡುತ್ತದೆ.

*"ನಿನ್ನ ಈಡೇರದ ಬಯಕೆಗಳ ಕಲ್ಮಶ*
*ನಿನ್ನ ಸುತ್ತಾ ಸುತ್ತೀ; ಬೆಳೆದು*
*ಹುತ್ತವಾಗಿದೆ."* (ಕ್ಷೇತ್ರ, ಪು.5)

ಮನುಷ್ಯ ತನ್ನ ದೇಹದ ಸುತ್ತಾ ಕಾಮವೆಂಬ ಹುತ್ತವನ್ನು ಕಟ್ಟಿಕೊಂಡಿರುವುದು. ಇದರಿಂದ ಹೊರ ಬಂದರೆ ಮಾತ್ರ ಮಾನವನಾಗಲು ಸಾಧ್ಯ. ಇಲ್ಲದೆ ಇದ್ದರೆ ಕಾಮದಲ್ಲಿ ವ್ಯಕ್ತಿ ನಾಶದ ಸಂಗತಿ ಅಡಕವಾಗಿರುವುದನ್ನು

ಅನಾವರಣಗೊಳಿಸಲಾಗಿದೆ. ಹಾಗೆಯೇ 'ಮೌನ' ಕವಿತೆಯಲ್ಲಿ ಪ್ರೇಮಿಗಳು ಮುಖಾಮುಖಿಯಾಗಿ ಕುಳಿತುಕೊಂಡು ಮೌನದಿಂದಲೇ ವ್ಯವಹರಿಸುವುದು. ಪ್ರೇಯಸಿ ತನ್ನ ಯೌವ್ವನದ ಬಗ್ಗೆ ಗರ್ವಪಟ್ಟುಕೊಳ್ಳುವುದು. ಈ ನಡುವೆನೇ ಅವರು ಸುಖಕ್ಕೆ ಬಲಿಯಾಗುವುದು ಕಂಡುಬರುತ್ತದೆ.

*"ಆಗುತ್ತ ಇರಲು-ರಾತ್ರಿ ಬರುತ್ತಾ ಇತ್ತು*
*ಆ ಕಪ್ಪು ಮುಸುಕಿನೊಳಗೆ*
*ನನ್ನ ಒಣ ಮರ ಅವಳ ಚಿಗಿತ ಮರ*
*ಆಡುಗುತ್ತಿತ್ತು.*
*ಮತ್ತೆ ಅವಳು ನಾನೂ ಇಬ್ಬರೂ ಸುಮ್ಮನಿದ್ದೆವು."*
(ಕ್ಷೇತ್ರ, ಪು.8)

ಎಂಬ ಸಾಲುಗಳಲ್ಲಿ ಪ್ರೇಮಿಗಳು ನಿಜವಾದ ಸಂತೋಷವನ್ನು ಕಾಮದಿಂದ ಪಡೆಯಲು ಪ್ರಯತ್ನಿಸುವುದು. ಕುರಿತು ಕವಿಯಲ್ಲಿ ವಿಷಾದ ವ್ಯಕ್ತವಾಗಿದೆ.

*"ಗುಲಾಬಿ ದಳಗಳಲ್ಲಿ ಸ್ಖಲಿತ ಸುಖ*
*ಬಾಷ್ಪಗಳು ಫಲಿತ ಬೀಜಗಳು ಪುತ್ರ-*
*ಕಾಮೇಷ್ಟಿ ಯಜ್ಞಗಳು; ಬಲಿಗಳು"* (ಕ್ಷೇತ್ರ, ಪು.1)

ಇಲ್ಲಿ ಕವಿ ಸಾಂಪ್ರದಾಯಿಕ ಚಿಂತನೆ ನೆಲೆಯಿಂದ ಹೆಣ್ಣನ್ನು ಮೃದತ್ವ, ಚಂಚಲೆ ಹಾಗೂ ಪುರುಷ ಕಾಮಕ್ಕಾಗಿ ಬಲಿಯಾಗುವ ಸಂಗತಿಯನ್ನು ಚಿತ್ರಿಸಲಾಗಿದೆ. ಪುರುಷನ ಕಾಮತೃಷೆಯಿಂದ ಹೆಣ್ಣು ಹೊರ ಬಂದಾಗ ಮಾತ್ರ ಸ್ವತಂತ್ರ ಬದುಕನ್ನು ಕಟ್ಟಿಕೊಳ್ಳಲು ಸಾಧ್ಯವಾಗುತ್ತದೆ.

*"ವೇಶ್ಯೆಯಂತೆ ಮೈ ತೆರೆದು*
*ರಣಹದ್ದುಗಳ ಕುಟುಕುಗಳಂತೆ ಗಮಿಸುವವನ್ನು ಕಾಮ-*
*ಕುಟುಕಗಳಿಗೆ, ಗಟುಕು ಗುಟುಕು ಮಾಂಸ ಒಪ್ಪಿಸಿ*
*ಅಸ್ಥಿಪಂಜರವಾಯಿತು; ಸತ್ತು; ಅತ್ತು."* (ಕ್ಷೇತ್ರ, ಪು.6)

ಹೆಣ್ಣು ಪುರುಷನಿಗೆ ಕೇವಲ ಸಂಭೋಗದ ವಸ್ತುವಾಗುವುದನ್ನು 'ಆಯಾಮಗಳು' ಎಂಬ ಕವಿತೆ ಹೇಳ ಬಯಸುವುದನ್ನು ಕಾಣಬಹುದು.

ಮೇಲಿನ ಕವಿತೆಗಳಲ್ಲಿ ಕವಿ ಪ್ರೇಮ-ಕಾಮಗಳಲ್ಲಿನ ವಿಕೃತಿಯನ್ನು ಬಿಚ್ಚಿಡಲಾಗಿದೆ. ಇಂದಿನ ಯುವಪೀಳಿಗೆ ನೈಜವಾದ ಪ್ರೀತಿಯಿಂದ ದೂರವಾಗುತ್ತಾ, ಇದ್ದು ದೈಹಿಕ ಆಕರ್ಷಣೆಯಿಂದ ಕೂಡಿರುತ್ತದೆ. ಇಂತಹ ಮನೋಭಾವನೆಗಳಿಂದ ದೂರಸರಿದು, ಪ್ರೇಮಿಗಳು ಆದರ್ಶ ಪ್ರೇಮಿಗಳ ಜೀವನ ಮಾರ್ಗವನ್ನು ಅನುಸರಿಸಬೇಕಾದ ಮನೋ ಇಂಗಿತ ಅತ್ಯಗತ್ಯ ಎಂಬ ಸಂಗತಿಯನ್ನು ತೋರಿಸುತ್ತದೆ. ಯುವ ಜನಾಂಗಕ್ಕೆ ಯಾವುದು ಸರಿ – ತಪ್ಪು, ಗುಣ – ದೋಷ, ಹಿತ – ಅಹಿತ, ಮಾನವೀಯ – ಅಮಾನವೀಯ, ನ್ಯಾಯ – ಅನ್ಯಾಯಗಳ ಕುರಿತು ಸ್ಪಷ್ಟ ತಿಳುವಳಿಕೆಯನ್ನು ನೀಡುವ ಅವಶ್ಯಕತೆಯನ್ನು ಈ ಮೂಲಕ ಯುವ ಜನಾಂಗವನ್ನು ವಿವೇಕಶಾಲಿಯನ್ನಾಗಿಸಬಹುದು.

**ಉಪಸಂಹಾರ**

ಒಟ್ಟಾರೆಯಾಗಿ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣನ್ನು ಭೋಗದ ವಸ್ತುವನ್ನಾಗಿ ಮಾತ್ರ ಗಮನಹರಿಸಿರುವುದನ್ನು ನೋಡಲಾಗಿದೆ. ಹೆಣ್ಣು ಪ್ರೇಮ-ಕಾಮ ಎರಡಕ್ಕೂ ಬಲಿಪಶುವಾಗುತ್ತಾಳೆ. ಸಮಾಜದಲ್ಲಿ ಹೆಣ್ಣು ಶೋಷಣೆಗೆ ಒಳಗಾಗುತ್ತಲೇ ಇದ್ದಾಳೆ. ಪುರುಷ-ಸ್ತ್ರೀಯರಲ್ಲಿ ಅಸಮಾನತೆ ಕಾಣಿಸಿರುವುದು ನಾಗರೀಕ ಸಮಾಜ ತಲೆತಗ್ಗಿಸುವಂತಹದು. ಶಿಕ್ಷಿತ-ಅಶಿಕ್ಷಿತ ಬೇಧಭಾವವಿಲ್ಲದೆ ಹೆಣ್ಣಿನ ಶೋಷಣೆ ವರ್ತಮಾನ ಸಮಾಜದಲ್ಲಿ ನಿರಂತರವಾಗಿ ನಡೆಯುತ್ತಿದೆ. ಪುರುಷನ ಅಹಂ, ಸ್ತ್ರೀಯ ಕೀಳರಿಮೆ ಸಮಾನತೆಗೆ ಅಡ್ಡಿಯಾಗಿದೆ. 'ಹೆಣ್ಣು ಸಮಾಜದ ಹುಣ್ಣಲ್ಲ, ಹೆಣ್ಣು ಸಮಾಜದ ಕಣ್ಣಾಗಬೇಕೆಂಬ' ತುಮುಲ ಕವಿಗಿದೆ. ಇದನ್ನು ತನ್ನ ಸಾಹಿತ್ಯ ಕುಂಭದಲ್ಲಿ ಭಾವಾಭಿವ್ಯಕ್ತಗೊಳಿಸುವಲ್ಲಿ ಕವಿ ಸಂಕಿರಣಗೊಂಡಿದ್ದಾನೆ. ಹೆಣ್ಣನ್ನು ಹುಟ್ಟಿದಾಗಿನಿಂದಲೂ ಅವಮಾನಿಸುವ ಕೃತ್ಯ ಬದಲಾಗಬೇಕು. ಹೆಣ್ಣು ತನ್ನೆಲ್ಲಾ ಮೂಢನಂಬಿಕೆಗಳಿಂದ ಹೊರಬಂದು ವೈಜ್ಞಾನಿಕ ಮನೋಭಾವವನ್ನು ಬೆಳಸಿಕೊಳ್ಳಬೇಕು. ಸಮಾಜದಲ್ಲಿ ಸ್ತ್ರೀಗಿಂತ ಪುರುಷ ಮೇಲು ಎಂಬ ಧೋರಣೆ ಮರೆಮಾಚಬೇಕು. ಮಹಿಳೆಯರ ಶೋಷಣೆಯ ವಿರುದ್ಧ ಹೋರಾಡಲು ಮಹಿಳೆಯರು ಸಂಘಟಿತರಾಗಬೇಕು. ದೌರ್ಜನ್ಯ ಎಸಗಿದಾತನ ವಿರುದ್ಧ ಮತ್ತು ಎಲ್ಲ ಅನ್ಯಾಯಗಳ ವಿರುದ್ಧ ಹೋರಾಡುವ ಕೆಚ್ಚನ್ನು ಹೆಂಗಸರು ಮೈಗೂಡಿಸಿಕೊಳ್ಳಬೇಕು. ತಪ್ಪು ಎಸಗಿದ ವ್ಯಕ್ತಿಗೆ ಕಾನೂನಿನ ಮೂಲಕ ತಕ್ಕ ಶಿಕ್ಷೆ ನೀಡಬೇಕು. ಪುರುಷನ ದೌರ್ಜನ್ಯದ ಮುಂದೆ ಅಸಹಾಯಕಳಾಗುವ ಹೆಣ್ಣು ಅಸಾಹಾಯಕತೆಯನ್ನು ಮೆಟ್ಟಿನಿಂತು ಸ್ವಾಭಿಮಾನದ ಬದುಕನ್ನು ಕಟ್ಟಿಕೊಳ್ಳಬೇಕು. ಆವಾಗಲೇ ಸ್ವಸ್ಥ ಸಮಾಜ ನಿರ್ಮಾಣಗೊಳ್ಳಲು ಸಾಧ್ಯವಾಗುತ್ತದೆ.

**ಪರಾಮರ್ಶನ/ಆಕರ ಗ್ರಂಥಗಳು**


- ಸರ್ಫ್ರಾಜ್ ಚಂದ್ರಗುತ್ತಿ. (2007). *ಸುಗಮ ಸಂಗೀತಕ್ಕೆ ಆಧುನಿಕ ಕನ್ನಡ ಕವಿಗಳ ಕಾಣಿಕೆ.* ಅಕ್ಷಯ ಪ್ರಕಾಶನ. ಪು.231
- ತಿರುಮಲೇಶ ಕೆ ವಿ. (1994). *ಆಯ್ದ ಕವಿತೆಗಳು.* ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
- ತಿರುಮಲೇಶ ಕೆ ವಿ. (2007). *ಕಾವ್ಯಕರಣ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ವ್ಯಾಸ ಎಂ. (1972). *ಸುಳಿ.* ನವ್ಯ ಸಾಹಿತ್ಯ ಸಂಘ.
- ವ್ಯಾಸ ಎಂ. (1999). *ಕ್ಷೇತ್ರ.* ಸಿರಿಗನ್ನಡ ಮುದ್ರಣಾಲಯ.
- ವ್ಯಾಸ ಎಂ. (2010). *ಸೃಷ್ಟಿ.* ಅಜಂತ ಪ್ರಕಾಶನ.
- ಯರವಿನ ತೆಲಿನಮಠ. (2006). *ನವ್ಯ ವಿಮರ್ಶೆ.* ಕನ್ನಡ ಸಾಹಿತ್ಯ ಪರಿಷತ್ತು.